# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

## ಅಫಜಲಪೂರ.

**ಸಿ.ಸಿ. ನಂ.69/2017**

**ದೇವಲಗಾಣಗಾಪೂರ ಪೊಲೀಸ್ ಠಾಣೆ**

॥ ವಿರುದ್ಧ ॥

**ಮಹಾಂತಗೌಡ ಹಾಗೂ ಇತರರ**

## ಃದೋಷಾರೋಪಣೆಃ

1. ಮಹಾಂತಗೌಡ ತಂದೆ ಅಪ್ಪರಾವ್ ಪಾಟೀಲ
   ವಃ43 ವರ್ಷ, ಉಃ ಡ್ರೈವರ್ ಸಾ॥ ಆತನೂರ.

2. ಕುತುಬ ತಂದೆ ಮಹಿಬೂಬಸಾಬ ನದಾಫ್
   ವಃ32 ವರ್ಷ, ಉಃ ಕ್ಲೀನರ, ಸಾ॥ ಆತನೂರ.

3. ಪ್ರವೀಣ ತಂದೆ ಶಿವಯ್ಯಾ ಗುತ್ತೇದಾರ
   ವಃ48 ವರ್ಷ, ಉಃ ವ್ಯಾಪಾರ, ಸಾ॥ ಆತನೂರ.
   ಹಾ॥ವ॥ ಗೋದುತಾಯಿ ನಗರ ಕಲಬುರಗಿ.

4. ದತ್ತಪ್ಪ ತಂದೆ ಸಾಯಿಬಣ್ಣ ನಾಯ್ಕೋಡಿ
   ವಃ58 ವರ್ಷ, ಉಃ ಕೂಲಿ ಕೆಲಸ, ಸಾ॥ ಸಾಗನೂರ

5. ವಿಠಲ್ ತಂದೆ ಹಣಮಂತ ಡೆಂಗೆನ್ನವರ್
   ವಃ28 ವರ್ಷ, ಉಃ ಕೂಲಿಕೆಲಸ, ಸಾ॥ ಸಾಗನೂರ

6. ಕಾಶೀನಾಥ ತಂದೆ ಲಾಲಪ್ಪ ಬೊರೋಟಿ
   ವಃ48 ವರ್ಷ, ಉಃ ಕೂಲಿಕೆಲಸ, ಸಾ॥ ಸಾಗನೂರ
   ಆರೋಪಿತರಾದ ನಿಮ್ಮ ಮೇಲೆ...

ನಾನು **ಪ್ರಶಾಂತ ಬಾದವಾಡಗಿ**, ಬಿ.ಎ., ಎಲ್‌ಎಲ್.ಬಿ., (ಸ್ಪೇಷಲ್), ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ದಿನಾಂಕಃ14-03.2017 ರಂದು ಮುಂಜಾನೆ 10.30 ಗಂಟೆಯ ಸಮಯದಲ್ಲಿ ಸಾಗನೂರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಅಧಿಕೃತ ಪರವಾನಿಗೆ ಪತ್ರ ಇಲ್ಲದೆ ಅನಧೀಕೃತವಾಗಿ ಮಾರಾಟ ಮಾಡಲು 1 ಮತ್ತು 2ನೇ ಆರೋಪಿತರು ಜೀಪ್ ನಂಃಕೆಎ-32/ಎಮ್-573 ನೇದ್ದರಲ್ಲಿ 3ನೇ ಆರೋಪಿತನ ಮದ್ಯದ ಅಂಗಡಿಯಿಂದ ತಂದು 4 ರಿಂದ 6 ನೇ ಆರೋಪಿತರಿಗೆ ಮದ್ಯ ನೀಡಿ ಮದ್ಯವನ್ನು ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾಗ, ಚಾಸಾ-1 ರವರು ಪಂಚರ ಹಾಗೂ ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಆರೋಪಿತರಿಂದ 48 ಬಿಯರ್ ಬಾಟಲಿಗಳು, 1056 ಟೆಟ್ರಾ ಪ್ಯಾಕೇಟ್‌ಗಳು, ಓರಿಜನಲ್ ಟೆಟ್ರಾ ಪ್ಯಾಕೇಟ್‌ಗಳು, 192 ಓಲ್ಡ್ ಟಾವರನ್ ವಿಸ್ಕಿ ಬಾಟಲಿಗಳು ಒಟ್ಟು ಅಂದಾಜು 53,370.24/- ರೂಪಾಯಿಗಳಷ್ಟು ಮೌಲ್ಯ ಹೊಂದಿದ ಮದ್ಯದ ಬಾಟಲಿಗಳು, ನಗದು ಹಣ ರೂ.1200/- ಹಾಗೂ ಜೀಪ್‌ನ್ನು ಚಾಸಾ-1 ರವರು ಜಪ್ತಿಪಡಿಸಿಕೊಂಡಿರುವ ಕಾರಣ **ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಮತ್ತು 34** ರಡಿಯಲ್ಲಿ ಗುನ್ನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ08.03.2018 ಜೆಎಮ್‌ಎಫ್‌ಸಿ, ಅಫಜಲಪೂರ.

**ಆರೋಪಿತರ ಹೇಳಿಕೆ**

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ಆರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವೀರಾ ಅಥವಾ ವಿಚಾರಣೆ ಬಯಸುತ್ತೀರಾ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ08.03.2018 ಜೆಎಮ್‌ಎಫ್‌ಸಿ, ಅಫಜಲಪೂರ.